ಮತ್ತು ಎಕಲಾಸಪುರ ಗ್ರಾಮದವರು ಭಾಲ್ಕಿವರೆಗಿನ ಕಾರ್ಯಾಚರಣೆಯಲ್ಲಿರುವ ಸಾರಿಗೆ ಸರತಿಗಳ ಸೇವೆಯನ್ನು ಕಲ್ಪಿಸಲಾಗಿರುತ್ತದೆ.

(ಇ) ಬಸ್ ಸೌಕರ್ಯ ಇಲ್ಲದ ಮೂರು ಗ್ರಾಮಗಳಿಗೆ ಬಸ್ ಕಾರ್ಯಾಚರಣೆಯೋಗ್ಯ ರಸ್ತೆ ಕಲ್ಪಿಸಿದ ತಕ್ಷಣ ಬಸ್ ಸೇವೆ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಭಾಲ್ಕಿಯಲ್ಲಿನ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಾಣ

766 (842); ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ)

(ಅ) ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಇಲಾಖಾವತಿಯಿಂದ ಎಷ್ಟು ವಸತಿ ಶಾಲೆಗಳಿವೆ: (ಇವುಗಳಲ್ಲಿ ಮೆಟ್ರಿಕ್ ಪೂರ್ವ ಹಾಗೂ ನಂತರದ ವಸತಿ ಶಾಲೆಗಳ ವಿವರ ನೀಡುವುದು)

(ಆ) ಹಾಗಾದರೆ, ಇವುಗಳಲ್ಲಿ ಎಷ್ಟು ವಸತಿ ಶಾಲೆಗಳಿಗೆ ಸ್ವಂತ ಕಟ್ಟಡಗಳಿವೆ; ಎಷ್ಟು ವಸತಿ ನಿಲಯಗಳು ಬಾಡಿಗೆ ಕಟ್ಟಡಗಳಲ್ಲಿವೆ;

(ಇ) ಹಾಗಿದ್ದಲ್ಲಿ, ಬಾಡಿಗೆ ಕಟ್ಟಡದಲ್ಲಿರುವ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಸರ್ಕಾರ ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವುದೆ?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

(ಅ) ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ 3 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ವಿವರಗಳು ಈ ಕೆಳಕಂಡಂತೆ ಇದೆ.

ಕ್ರ. ಸಂ.	ವಸತಿ ಶಾಲೆಗಳ ವಿವರ	ವರ್ಗ	ಷರಾ
1	ಮೊ.ದೇ.ವ.ಶಾಲೆ. ಭಾಲ್ಕಿ	ಪ.ಜಾತಿ	6 ರಿಂದ 10ನೇ ತರಗತಿ
2	ಮೊ.ದೇ.ವ.ಶಾಲೆ, ಭಾಲ್ಕಿ	ಹಿಂ. ವರ್ಗ	6 ರಿಂದ 10ನೇ ತರಗತಿ
3	ಕಿ.ರಾ.ಜೆ.ವ.ಶಾಲೆ, ಭಾಲ್ಕಿ	ಪ.ಜಾತಿ	6 ರಿಂದ 10ನೇ ತರಗತಿ

(ಆ) ಸದರಿ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡವಿರುವುದಿಲ್ಲ.

(ಇ) (ಅ)ಪ.ಜಾತಿಯ ಮೊ.ದೇ.ವ.ಶಾಲೆ, ಭಾಲ್ಕಿ ಮತ್ತು ಹಿಂ.ವರ್ಗ ಮೊ.ದೇ.ವ.ಶಾಲೆ, ಭಾಲ್ಕಿ ಇವುಗಳಿಗೆ ಶಾಲಾ ಸಂಕೀರ್ಣ ನಿರ್ಮಾಣ ಮಾಡಲು ಕ್ರಮವಹಿಸಲಾಗಿದೆ.

(ಆ) ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಭಾಲ್ಕಿ ಇದಕ್ಕೆ ಜಮೀನು ಇರುವುದಿಲ್ಲ, ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಜಮೀನು ಒದಗಿಸಿದ್ದಲ್ಲಿ ಕ್ರಮವಹಿಸಲಾಗುವುದು.

(ಇ) ನಿವೇಶನ ಲಭ್ಯವಿರುವ ವಸತಿ ಶಾಲೆಗಳ ನಿರ್ಮಾಣವನ್ನು ಅನುದಾನ ಲಭ್ಯತೆಗನುಗುಣವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾ ಗುವುದು.

ಹಿಂದುಳಿದ ತಾಲ್ಲೂಕುಗಳಿಗೆ ಮೀಸಲಿಟ್ಟಿರುವ ಅನುದಾನ

767 (843); ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ)

(ಅ) 2013–14ನೇ ಸಾಲಿನಲ್ಲಿ ಡಾ. ನಂಜುಂಡಪ್ಪ ವರದಿಯನ್ವಯ ಹಿಂದುಳಿದ ತಾಲ್ಲೂಕುಗಳಿಗೆ ಎಷ್ಟು ಅನುದಾನ ಮೀಸಲಿಡಲಾಗಿದೆ; (ವಿವರ ನೀಡು ವುದು)

(ಆ) ಮೇ 2014ರವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ. ಪ್ರತಿ ಶತ ಎಷ್ಟು ಸಾಧನೆ ಮಾಡಲಾಗಿದೆ? (ವಿವರ ನೀಡುವುದು)

ಶ್ರೀ ಎಸ್. ಆರ್. ಪಾಟೀಲ್ (ಯೋಜನೆ ಮತ್ತು ಸಾಂಖ್ಯಿಕ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

(ಅ) 2013–14ನೇ ಸಾಲಿನಲ್ಲಿ ಡಾ. ನಂಜುಂಡಪ್ಪ ವರದಿಯನ್ವಯ ಹಿಂದು ಳಿದ ತಾಲ್ಲೂಕುಗಳಿಗೆ ಮೀಸಲಿಡಲಾದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.